ವಿಚಾರ. ಹಾಗಾಗಿ ಅಲ್ಲಿ ಮುಖ್ಯವಾಗಿ ಏನೆಂದರೆ ಬೇರೆ ಕಡೆಯಿಂದ ಇಂತಹ ಏತನೀರಾವ
ಯೋಜನೆಯ ಒಂದು ದೊಡ್ಡ ಪ್ರಗತಿ ಸೊರಬ ತಾಲ್ಲೂಕಿನಲ್ಲಿ ಈಗ ನಡೆಯುತ್ತಿದೆ. ಅದನ್ನು ಕೂ
ತಾವು ಏನು ಮೂರನೆ ಒಂದು ಭಾಗ ಬಿಡುಗಡೆ ಮಾಡುತ್ತೇವೆ ಎಂದು ಏನು ಮಾಡಿದ್ದೀರಿ, ಅದ
ಪ್ರಕಾರ, ಏಕೆಂದರೆ ಸಣ್ಣಪುಟ್ಟ ಕ್ಲಾರಿಫಿಕೇಷನ್‌ಗೂ ಕೂಡ ಶಿಕಾರಿಪುರಕ್ಕೆ ಮತ್ತೊಂದು ತಾಲ್ಲೂಕಿ
ಹೋಗಬೇಕೆಂದರೆ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಈ ಮಾತು ಹೇಳುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ, ಅಲ್ಲಿ ಏನು ಕಾಮಗಾರಿ ನಡೆಯುತ್ತ
ಅವುಗಳಿಗೆ ತೊಂದರೆ ಆಗದೆ ಇರುವ ರೀತಿಯಲ್ಲಿ ಒಬ್ಬರು ಅಸಿಸ್ಟೆಂಟ್ ಇಂಜೀನಿಯರ್‌ನ್ನು ಆ
ಇಟ್ಟು ಅವರು ಶಿಕಾರಿಪುರಕ್ಕೆ ಹೋಗದ ಹಾಗೆ ಅಲ್ಲಿ ಸೊರಬದಲ್ಲೆ ಕೆಲಸಗಳನ್ನು ನಿರ್ವಹಣ
ಮಾಡುವಂತಹ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ. ಕೆಲಸ ಯಾವರೀತಿಯಲ್ಲಿಯೂ
ಕೂಡ ಕುಂಠಿತವಾಗದೆ ಇರುವಂತಹ ರೀತಿಯಲ್ಲಿ ಪರಿಪೂರ್ಣ ಮಾಡಿಕೊಡುತ್ತೇನೆ ಎನ್ನುವಂತ
ಆಶ್ವಾಸನೆಯನ್ನು ಕೊಡುತ್ತೇನೆ.

ಆಳಂದ ಪಟ್ಟಣದಲ್ಲಿ ಉಪ ಕಾರಾಗೃಹ

402 - ಶ್ರೀ ಸುಭಾಷ್ ಆರ್. ಗುತ್ತೇದಾರ್ (ಆಳಂದ) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದ
ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ
ಉತ್ತರಿಸುವರೆ?

*ಅ) ಆಳಂದ ಪಟ್ಟಣದಲ್ಲಿ ಉಪ ಕಾರಾಗೃಹ ನಿರ್ಮಾಣ ಪ್ರಾರಂಭಗೊಂಡು ಸುಮಾರು
6 ವರ್ಷಗಳಾಗಿದ್ದರು ಅದು ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಆ) ಈ ನಿರ್ಮಾಣ ಕಾರ್ಯವು ಯಾವ ಹಂತದಲ್ಲಿದೆ ?

ಇ) ಅದಷ್ಟು ಜಾಗ್ರತೆ ನಿರ್ಮಾಣಕಾರ್ಯ ಪೂರ್ಣಗೊಳಿಸಲು ಕೈಗೊಂಡ ಕ್ರಮವೇನು

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹರಕ್ಷಕ ದಳ ನಾಗರೀಕ ರಕ್ಷಣಾ ಮತ್ತು ಸೈನಿಕ ಕಲ್ಯಾ
ರಾಜ್ಯ ಸಚಿವರು) :

ಅ) ಹೌದು

ಆ) ಮೊದಲ ಹಂತದಲ್ಲಿ ಬಂದಿಗಳ ಕಟ್ಟಡದ ಕಾಮಗಾರಿಯ
ಪೂರ್ಣಗೊಂಡಿರುತ್ತದೆ.

ಇ) ಎರಡನೇ ಹಂತದ ಕಾಮಗಾರಿಯ ಅಂದಾಜು ಮತ್ತು ನಕ್ಷೆಯನ್ನು ತಯಾರಿಸ
ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದ್ದು, ಈ ಸಂಬಂಧವಾಗಿ ಅನುದಾನಬಿಡುಗಡೆಗೆ ಕ್ರ
ಕೈಗೊಳ್ಳಲಾಗಿದೆ.

6.10 ಪಿಎಂ

ಶ್ರೀ ಸುಭಾಷ್ ಆರ್. ಗುತ್ತೇದಾರ್ : ಮಾನ್ಯ ಉಪಾಧ್ಯಕ್ಷರೆ, ಆಳಂದ ಪಟ್ಟಣದಲ್ಲಿ ಉಪ ಕಾರಾಗೃಹ ನಿರ್ಮಾಣ ಪ್ರಾರಂಭಗೊಂಡು ಸುಮಾರು 5-6 ವರ್ಷಗಳಾಗಿದ್ದರೂ ಅದು ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವಂತಹುದಕ್ಕೆ "ಹೌದು" ಎಂದು ಉತ್ತರವನ್ನು ನೀಡಿದ್ದಾರೆ. ಈ ನಿರ್ಮಾಣ ಕಾರ್ಯವು ಯಾವ ಹಂತದಲ್ಲಿದೆ ಎಂದರೆ, ಮೊದಲ ಹಂತದಲ್ಲಿ ಬಂಧಿಗಳ ಕಟ್ಟಡದ ಕಾಮಗಾರಿಯು ಪೂರ್ಣಗೊಂಡಿರುತ್ತದೆ ಎಂದು ಹೇಳಿದ್ದಾರೆ. ಇದು ಪೂರ್ಣಗೊಂಡು 5-6 ವರ್ಷಗಳಾಗಿದ್ದರೂ ಕೂಡ ಅದನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಉಪಯೋಗಿಸಿಕೊಳ್ಳಲಾಗುತ್ತಿಲ್ಲ, ಆದ್ದರಿಂದ ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಕಟ್ಟಡವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಉಪಯೋಗ ಮಾಡಿಕೊಳ್ಳಬೇಕು ಎಂದು ಕೇಳುತ್ತಿದ್ದೇನೆ. ಮೂರನೆಯದಾಗಿ, ಅದಷ್ಟು ಜಾಗ್ರತೆ ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ಕೈಗೊಂಡ ಕ್ರಮವೇನು ಎಂದು ಕೇಳಿದ್ದಕ್ಕೆ ಎರಡನೇ ಹಂತದ ಕಾಮಗಾರಿಯ ಅಂದಾಜು ಮತ್ತು ನಕ್ಷೆಯನ್ನು ತಯಾರಿಸಲು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದ್ದು, ಈ ಸಂಬಂಧವಾಗಿ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ. ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು ಎಂಬುದನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ವಿ. ಸೋಮಣ್ಣ : ಸನ್ಮಾನ್ಯ ಉಪಾಧ್ಯಕ್ಷರೆ, ಆಳಂದ ಪಟ್ಟಣದಲ್ಲಿ ತಾಲ್ಲೂಕು ಕಾರಾಗೃಹವನ್ನು ಕಟ್ಟುವುದಕ್ಕೆ ಈಗಾಗಲೇ ನಾಲ್ಕು ಎಕರೆಗೆ ಜಮೀನಿನಲ್ಲಿ ಮೊದಲನೆ ಹಂತದ ಕಾಮಗಾರಿಯನ್ನು 21 ಲಕ್ಷ ರೂಪಾಯಿ ಖರ್ಚು ಮಾಡಿ ನಾವು ಪೂರ್ಣಗೊಳಿಸಿದ್ದೇವೆ. ನಾನೂ ಕೂಡ ಅವರ ಕ್ಷೇತ್ರಕ್ಕೆ ಹೋಗಿ ನೋಡಿಬಂದಿದ್ದೇನೆ. ಅಲ್ಲಿಂದ ಬಂದತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ. ಉಪಾಧ್ಯಕ್ಷರೆ, ಇಲ್ಲಿ ಏನಾಗಿದೆಯೆಂದರೆ, ಇವರು ಕಾರಾಗೃಹವನ್ನು ಕಟ್ಟಿದಾಗ ಪುರುಷರ ಬ್ಯಾಂಕ್‌ಗಳನ್ನು ಮಾತ್ರ ಕಟ್ಟಲಾಗಿತ್ತು. ಮತ್ತೆ ದೊಡ್ಡ ಗೋಡೆ, ಹೆಣ್ಣುಮಕ್ಕಳ ಕಾರಾಗೃಹ ಮತ್ತು ಅಡುಗೆಮನೆಗಳನ್ನು ಕಟ್ಟಿರಲಿಲ್ಲ. ಇದಕ್ಕೆ ಸಂಬಂಧಪಟ್ಟಹಾಗೆ ಈಗಾಗಲೇ ನಾನು ಲೋಕೋಪಯೋಗಿ ಇಲಾಖೆಯವರನ್ನು ಕರೆಸಿ ಚರ್ಚೆ ಮಾಡಲಾಗಿದ್ದು ಅವರು ನಕ್ಷೆಯನ್ನು ಸಹ ತಯಾರಿಸಿ ಮಂಜೂರಾತಿಗಾಗಿ ನನಗೆ ಕಳುಹಿಸಿಕೊಟ್ಟಿದ್ದಾರೆ, ಅದಕ್ಕೆ ಹಣವನ್ನೂ ಕೂಡ ನಾವು ಈ ವರ್ಷದಲ್ಲಿ ಬಿಡುಗಡೆ ಮಾಡುತ್ತಿದ್ದೇವೆ. ನಾವು ಯಾವುದೇ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸುವುದರಿಂದ ಎರಡನೇ ಹಂತದ ಕಾಮಗಾರಿಯನ್ನು ಮುಗಿಸಿದ ತಕ್ಷಣ ನಾವು ಈ ಉಪಕಾರಾಗೃಹದ ಪ್ರಾರಂಭೋತ್ಸವವನ್ನು ಮಾಡುತ್ತೇವೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್ : ಆ ಕಟ್ಟಡವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಉಪಯೋಗ ಮಾಡಿಕೊಳ್ಳಬೇಕೆಂದು ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ವಿ. ಸೋಮಣ್ಣ : ಸನ್ಮಾನ್ಯ ಸುಭಾಷ್‌ರವರು ನನ್ನನ್ನು ಕರೆದುಕೊಂಡ ಹೋಗಿ ಆ ಕಟ್ಟಡವನ್ನು ತೋರಿಸಿದ್ದಾರೆ. ನಮ್ಮ ಇಲಾಖೆಯಲ್ಲಿ ಕಟ್ಟಡ ಕಟ್ಟಿರುವುದಕ್ಕೆ ಸೆಕ್ಯುರಿಟಿ ಇರಲಿಲ್ಲ. ಅದನ್ನು ತಿಳಿಸಿದ್ದೇನೆ.

ಇನ್ನು 8-10 ದಿವಸಗಳಲ್ಲಿ ನಮ್ಮ ಅಧಿಕಾರಗಳನ್ನು ಕರೆಸಿ ಎರಡನೇ ಹಂತದ ಕಾಮಗಾರಿಯನ್ನೂ ಕೂಡ ನಾವು ತಕ್ಷಣವೇ ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ನೀರಿನ ಕಾಲುವೆಗಳು

403 - ಶ್ರೀ ಬಿ. ಪ್ರಕಾಶ್ (ಕೆ.ಆರ್. ಪೇಟೆ) : ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್. ಪೇಟೆ ತಾಲ್ಲೂಕಿನ ಹಳೆಯ ನಾಲೆಗಳಾದ ಹೇಮಗಿರಿ, ಮಂದಗೆರೆ ಎಡದಂಡೆ ನಾಲಾಗಳು ಮತ್ತು ರಾಮದೇವರ ನಾಲೆಗಳು ಬಹಳ ಹಳೆಯದಾಗಿದ್ದು ಕೊನೆಯ ಭಾಗದ ಅಚ್ಚುಕಟ್ಟು ಪ್ರದೇಶಕ್ಕೆ ನೀರಿಲ್ಲದೆ ರೈತರು ಬವಣೆ ಪಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ನಾಲೆಗಳನ್ನು ಆಧುನೀಕರಣಗೊಳಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :

ಅ) ಹೌದು.

ಆ) ಪರಿಶೀಲಿಸಲಾಗುವುದು.

ಶ್ರೀ ಬಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನೀರಾವರಿಗೆ ಹೆಚ್ಚು ಆಧ್ಯತೆಯನ್ನು ಕೊಟ್ಟು ಪ್ರತಿವರ್ಷ ಸಾವಿರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿರುವಂಥದ್ದು ಪ್ರಶಂಸನೀಯ. ಜೊತೆಗೆ ಮಂಡ್ಯಜಿಲ್ಲೆಯ ಜೀವನಾಡಿಯಾದ ವಿಶ್ವೇಶ್ವರಯ್ಯ ನಾಲೆಯನ್ನು ಆಧುನೀಕರಣ ಮಾಡಿ ರೈತರ ಮೆಚ್ಚುಗೆಗೆ ಪಾತ್ರರಾಗಿದ್ದೀರಿ, ಆದರೆ ನಮ್ಮ ಕೆ.ಆರ್. ಪೇಟೆ ತಾಲ್ಲೂಕಿನ ಸುಮಾರು 200-300 ವರ್ಷಗಳ ಹಳೆಯದಾದ ನಾಲೆಗಳು ಅಂದರೆ ಹೇಮಗಿರಿ ನಾಲಾ, ಮಂದಗೆರೆ ಎಡದಂಡೆ, ಬಲದಂಡೆ ನಾಲೆಗಳು, ಮತ್ತು ಶ್ರೀರಾಮದೇವರ ಉತ್ತರ ನಾಲೆಗಳು ತುಂಬಾ ಕೆಟ್ಟ ಸ್ಥಿತಿಯಲ್ಲಿದ್ದು ಈ ಕಾಲುವೆಗಳು ತಮ್ಮ ಸ್ವರೂಪವನ್ನೇ ಕಳೆದುಕೊಂಡಿದ್ದಾವೆ. ಜೊತೆಗೆ ಈ ನಾಲೆಯ ಕೊನೆಯ ಭಾಗದ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಬರದೆ ರೈತರು ಕಂಗಾಲಾಗಿದ್ದಾರೆ. ಈ ನಾಲೆಯ ಅಚ್ಚುಕಟ್ಟು ಸುಮಾರು 15 ಎಕರೆ ಇದ್ದು ಇದರಲ್ಲಿ ಸುಮಾರು ಐದು ಸಾವಿರ ಎಕರೆಗೆ ನೀರು ಬಾರದೆ ತೊಂದರೆಯಾಗಿದೆ. ಇದಕ್ಕೆ ರೈತರು ಕಷ್ಟಪಟ್ಟು ರಾತ್ರಿವೇಳೆಯಲ್ಲಿ ಹೊಡೆದಾಟ ಮಾಡಿಕೊಂಡು ಹಾವುಗಳಕೈಯಲ್ಲಿ ಕಚ್ಚಿಸಿಕೊಂಡು ನೀರನ್ನು ಹಾಯಿಸುವಂತಹ ಪರಿಸ್ಥಿತಿ ಒದಗಿಬಂದಿದೆ. ಆ ಕಾರಣಕ್ಕಾಗಿ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸ್ವಾತಂತ್ರ್ಯ ಬಂದು ಇಂದಿಗೆ 50 ವರ್ಷಗಳ ಸುವರ್ಣ ಮಹೋತ್ಸವವನ್ನು ಆಚರಿಸುವಂತಹ ಸಂದರ್ಭದಲ್ಲಿ ನಮ್ಮ ರೈತರಿಗೆ ನಿಜವಾಗಿ ಸ್ವಾತಂತ್ರ್ಯವನ್ನು ತಂದುಕೊಡುತ್ತೀರೆಂದು ನಮ್ಮವರೇ ಆದ ನೀರಾವರಿ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಲಾಗುವುದು ಎಂಬ ಮಾತನ್ನು ಹೇಳಿದ್ದಾರೆ. ಈ ಪರಿಶೀಲನೆ ಯಾವಹಂತದಲ್ಲಿದೆ, ಹಾಗೂ ಇದಕ್ಕೇನಾದರೂ ಎಸ್ಟಿಮೇಟ್‌ನ್ನು